ದಿವಾನರವರು, ಅವರ ಭೇಟಿ ಮಾಡಲಿಚ್ಛೈಯುಳ್ಳ ದೊಡ್ಡ ಮನುಷ್ಯರುಗಳನ್ನು ಪ್ರತಿ ಶನಿವಾರದ ದಿವಸ ಮಧ್ಯಾನ್ಹ 12 ಘಂಟೇ ಲಾಗಾಯತು 2 ಘಂಟೆ ಪರಿಯಂತ ತಮ್ಮ ವಾಸಸ್ಥಾನದಲ್ಲಿ ಬರಮಾಡಿಕೊಳ್ಳುವರು.

ನೇಟಿವ ದೊಡ್ಡ ಮನುಷ್ಯರುಗಳು ಅವರಿಗೆ ಯಿಷ್ಟವಿರುವ ಪಕ್ಷಕ್ಕೆ ಅದೇ ದಿವಸ ಮಧ್ಯಾನ್ಹಾತ್ಪರ 3 ಘಂಟೆಗೆ ಬರಬಹುದು.

ಕೆ. ದೊರಸ್ವಾಮಿಅಯ್ಯರ್,
ಪ್ರೈವೆಟ್ ಸೆಕ್ರಟರಿ.

ವಿದ್ಯಾಭ್ಯಾಸದ ಇಲಾಖೆ.

ಸ್ರ 1889ನೇ ಇಸವಿ ಜುಲೈ ತಾರೀಖು 18.

ಮೈಸೂರು ದೇಶೀಯ ಪರೀಕ್ಷೆ.

ಸ್ರ 1890ನೇ ಇಸವಿಯಲ್ಲಿ ನಡೆಯುವ ಮೈಸೂರು ದೇಶೀಯ ವಿದ್ಯಾರ್ಥಿಗಳ ಪರೀಕ್ಷೆಯಲ್ಲಿ ಹಾಸನ ತಾಲ್ಲೂಕು ಹೆರಗು ಹೋಬಳಿ ಕನ್ನಡ ಸ್ಕೂಲಿನಿಂದ ತೇರ್ಗಡೆ ಹೊಂದುವಂಥಾ ವಿದ್ಯಾರ್ಥಿಗಳಿಗೆ ಇದರಡೀಕಂಡಂತೆ ಬಹುಮಾನಗಳು ಕೊಡಲ್ಪಡುವವು:—

1. ಹಾಸನ ತಾಲ್ಲೂಕು ದುದ್ದದ ಹೋಬಳಿ ಶೇಕದಾರ್ ಮು॥ ರಾ॥ ಬೇಲೂರು ಕೇಶವಾಚಾರ್ಯರಿಂದ	ಹೆರಗು ಸ್ಕೂಲ್ ವಿದ್ಯಾರ್ಥಿಗಳ ಪೈಕಿ ಯಲ್ಲಾಭಾಗಗಳೂ ಕೇರಿ ಮೊದಲನೇಯವನಾಗಿ ತೇರ್ಗಡೆ ಹೊಂದುವಂಥಾ ವಿದ್ಯಾರ್ಥಿಗೆ—'ಗಣಿತಾರ್ಣವ'
2. ಡಿಟೋ ಯವರಿಂದ	ಡಿಟೋ ಎರಡನೇಯವನಾಗಿ ತೇರ್ಗಡೆ ಹೊಂದುವಂಥಾ ವಿದ್ಯಾರ್ಥಿಗೆ—'ರವಿನ್ಯೂ ವಿಷಯಗಳನ್ನು ಕುರಿತ ಡೈಲಾಗ್ಸ್'
3. ಹಾಸನ ತಾಲ್ಲೂಕು ದುದ್ದದ ಹೋಬಳಿ ವಳಗೆರೆಹಳ್ಳಿ ಕಾನುಭೋಗ ಮು॥ ರಾ॥ ನರಸಿಂಹ್ಮಾಚಾರ್ಯರಿಂದ ..	ಹೆರಗೂ ಸ್ಕೂಲ್ ವಿದ್ಯಾರ್ಥಿಗಳ ಪೈಕಿ ಆವಶ್ಯಕಭಾಷೆಯಾದ ಕನ್ನಡದಲ್ಲಿ ಅಧಿಕವಾದ ನಂಬರು ಪಡೆದು ತೇರ್ಗಡೆ ಹೊಂದುವಂಥಾ ವಿದ್ಯಾರ್ಥಿಗೆ—'ಕಬ್ಬಮಂಜಿದರ್ಪಣ,' ಮಂಗಳೂರು ಭಾವೆ,
4. ಡಿಟೋ ಯವರಿಂದ	ಡಿಟೋ ಗಣಿತದಲ್ಲಿ ಅಧಿಕ ನಂಬರು ಪಡೆದು ತೇರ್ಗಡೆ ಹೊಂದುವಂಥಾ ವಿದ್ಯಾರ್ಥಿಗೆ—'ಲೀಲಾವತೀ ಗಣಿತ'
5. ಡಿಟೋ ಯವರಿಂದ	ಡಿಟೋ ಭೂಗೋಳ ಮತ್ತು ಚರಿತ್ರೆ ಈ ಭಾಗದಲ್ಲಿ ಅಧಿಕ ನಂಬರು ಪಡೆದು ತೇರ್ಗಡೆ ಹೊಂದುವಂಥಾ ವಿದ್ಯಾರ್ಥಿಗೆ—'ಭೂಗೋಳ ಶಾಸ್ತ್ರ,' ಮಂಗಳೂರು ಭಾವೆ,
6. ಡಿಟೋ ಯವರಿಂದ	ಡಿಟೋ ಐಚ್ಛಿಕಾಂಶಗಳಾದ ಆರೋಗ್ಯ ಮತ್ತು ವ್ಯವಸಾಯ ಈ ಭಾಗದಲ್ಲಿ ಅಧಿಕವಾದ ನಂಬರು ಪಡೆದು ತೇರ್ಗಡೆ ಹೊಂದುವಂಥಾ ವಿದ್ಯಾರ್ಥಿಗೆ—'1891ನೇ ಇಸವಿ ಉಪಾಧ್ಯಾಯರ ಪರೀಕ್ಷೆಗೆ ನಿಯಮಿಸಲ್ಪಡಬಹುದಾದ ಕನ್ನಡ ಭಾಷೆಗೆ ಸಂಬಂಧಪಟ್ಟ ಕಾವ್ಯಗ್ರಂಥ.'
7. ಹಾಸನ ತಾಲ್ಲೂಕು ದುದ್ದದ ಹೋಬಳಿ ಮೆಳಗೋಡು ಗ್ರಾಮದ ವಾಸಸ್ಥರಾದ ಜಮೀರ್ದಾರ್ ಮು॥ ರಾ॥ ರಂಗಯ್ಯಂಗಾರ್ರಿಂದ ..	ಡಿಟೋ ಗಣಿತದಲ್ಲಿ ಅಧಿಕ ನಂಬರು ಪಡೆದು ತೇರ್ಗಡೆ ಹೊಂದುವಂಥಾ ವಿದ್ಯಾರ್ಥಿಗೆ—ವಿದ್ಯಾಭ್ಯಾಸದ ಇಲಾಖೆ ವರ್ಷ ಸಬ್ ಡೆಪ್ಯುಟಿ ಇನ್ಸ್ಪೆಕ್ಟರಾದ, ಉ. ದಕ್ಷಿಣಾಮೂರ್ತಿ ಕಾಸ್ಟ್ರಿಗಳಿಂದ ರಚಿಸಲ್ಪಟ್ಟ ಸಟೀಕಾ ಜ್ಯೋಮಿನಿ ಭಾರತ.
8. ಫ್ರೈಂಜ್‌ರಾಕ್ಸ್ ಸಬ್ ಡಿವಿಜ್ ಮ್ಯೂಷಿ ಮು॥ ರಾ॥ ಕಠಗೋಪಾಚಾರ್ಯರಿಂದ	ಡಿಟೋ ಆವಶ್ಯಕಭಾಷೆಯಾದ ಕನ್ನಡದಲ್ಲಿ ಅಧಿಕವಾದ ನಂಬರು ಪಡೆದು ತೇರ್ಗಡೆ ಹೊಂದುವಂಥಾ ವಿದ್ಯಾರ್ಥಿಗೆ—'ಕರ್ಣಾಟಕ ಭಾಷಾ ಭೂಷಣ.'
9. ಹಾಸನ ತಾಲ್ಲೂಕು ಮೇಸ್ತ್ರಿ ಮು॥ ರಾ॥ ಎಸ್. ವೆಂಕಟಸುಬ್ಬಯ್ಯನವರಿಂದ	ಡಿಟೋ ಮೊದಲನೇ ತರಗತಿಯಲ್ಲಿ ಅಧಿಕ ನಂಬರು ಪಡೆದು ತೇರ್ಗಡೆ ಹೊಂದುವಂಥಾ ವಿದ್ಯಾರ್ಥಿಗೆ—'ಸಂಸ್ಕೃತ ಮತ್ತು ಕನ್ನಡ ನಿಘಂಟು'; ಹಾಗೆ ಮೊದಲನೇ ತರಗತಿಯಲ್ಲಿ ಯಾರೂ ತೇರ್ಗಡೆಯಾಗದೆ ಹೋದರೆ, ಎರಡನೇ ತರಗತಿಯಲ್ಲಿ ಮೊದಲನೇಯವನಾಗಿ ತೇರ್ಗಡೆ ಹೊಂದುವಂಥಾ ವಿದ್ಯಾರ್ಥಿಗೆ—'ಮುದ್ರಾಮಂಜೂಷ'.

221

ಸ್ಯ 1889ನೇ ಇಸವಿ ಜುಲೈ ತಾರೀಖು 25.

ಸ್ಯ 1890ನೇ ಇಸವಿಯಲ್ಲಿ ನಡೆಯುವ ಮೈಸೂರು ದೇಶೀಯ ವಿದ್ಯಾರ್ಥಿಗಳ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವಂಥಾವರಿಗೆ ಇದ ರಡಿ ಕಂಡಂತೆ ಬಹುಮಾನಗಳು ಕೊಡಲ್ಪಡುವವು:—

1 ಗೋರೀಬಿದನೂರು ತಾಲ್ಲೂಕು ಗವರ್ಣಮೆಂಟ್ ಕನ್ನಡ ಸ್ಕೂಲ್ ಹೆಡ್ ಮಾಸ್ಟರಾದ ವು॥ ರಾ॥ ಬಿ. ಕೃಷ್ಣಪ್ಪಂಗು ಯವರಿಂದ	ಚಿಂತಾಮಣಿ, ಕಿಡ್ಲಘಟ್ಟ, ಮತ್ತು ದೊಡ್ಡಬಳ್ಳಾಪುರ ಈ ತಾಲ್ಲೂಕು ಗವರ್ಣಮೆಂಟ್ ಕನ್ನಡ ಸ್ಕೂಲ್‌ಗಳಿಂದ ತೇರ್ಗಡೆ ಹೊಂದುವ ವಿದ್ಯಾರ್ಥಿಗಳ ಪೈಕಿ ಕನ್ನಡ ಭಾಷಾ ಗ್ರಂಥಗಳಲ್ಲಿ ಅಧಿಕವಾದ ನಂಬರುಗಳನ್ನ ಪಡೆಯುವಂಥಾವರಿಗೆ ಸಟೀಕಾ ಕನ್ನಡ ಗುರುಬಾಲಪ್ರಬೋಧಿಕೆ.
2 ಗೋರೀಬಿದನೂರು ತಾಲ್ಲೂಕು ಗವರ್ಣಮೆಂಟ್ ಕನ್ನಡ ಸ್ಕೂಲ್ ಅ॥ ಮಾ॥ ವು॥ ರಾ॥ ಯಂ. ವೆಂಕಟಪ್ಪನವರಿಂದ	ಚಿಂತಾಮಣಿ, ಕಿಡ್ಲಘಟ್ಟ ಮತ್ತು ದೊಡ್ಡಬಳಾಪುರ ಈ ತಾಲ್ಲೂಕು ಗವರ್ಣಮೆಂಟ್ ಕನ್ನಡ ಸ್ಕೂಲ್‌ಗಳಿಂದ ತೇರ್ಗಡೆ ಹೊಂದುವ ವಿದ್ಯಾರ್ಥಿಗಳ ಪೈಕಿ ಗಣಿತದಲ್ಲಿ ಅಧಿಕವಾದ ನಂಬರುಗಳನ್ನ ಪಡೆಯುವಂಥಾವರಿಗೆ ಮಂಗಳೂರು ಭಾಷಾ ಶಬ್ದಮಣಿದರ್ಪಣ
3 ಗೋರೀಬಿದನೂರು ತಾಲ್ಲೂಕು ಕೇಂದ ಪಿಕಮಿಸಾ ಅಜಾರಿದಾರ್ ವು॥ ರಾ॥ ಸಂಜೀವರಾಯಪ್ಪನವರಿಂದ .	ಆರೋಗ್ಯ ಮತ್ತು ವ್ಯವಸಾಯ ಶಾಸ್ತ್ರಗಳಲ್ಲಿ ಮೈಸೂರು ಶೀಮೆಯಲ್ಲಿ ಅಧಿಕವಾದ ನಂಬರುಗಳನ್ನ ಪಡೆದು ತೇರ್ಗಡೆ ಹೊಂದುವಂಥಾ ವಿದ್ಯಾರ್ಥಿಗೆ ಮೂವತ್ತುನಾಲ್ಕು ಸಂಧಿಗಳುಳ್ಳ ಸಟೀಕಾ ಜೈಮಿನಿ ಭಾರತ.
4 ಹೊಸದುರ್ಗ ತಾಲ್ಲೂಕು ಗವರ್ಣಮೆಂಟ್ ಕನ್ನಡ ಸ್ಕೂಲ್ ಹೆಡ್‌ಮಾಸ್ಟರ್ ವು॥ ರಾ॥ ಡಿ. ಪದ್ಮನಾಭಶಾಸ್ತ್ರಿಗಳಿಂದ	ಕಿಡ್ಲಘಟ್ಟ ತಾಲ್ಲೂಕು ಗವರ್ಣಮೆಂಟ್ ಕನ್ನಡ ಸ್ಕೂಲಿನಿಂದ ತೇರ್ಗಡೆ ಹೊಂದುವವರ ಪೈಕಿ ಕನ್ನಡ ಭಾಷಾ ಗ್ರಂಥಗಳಲ್ಲಿ ಅಧಿಕವಾದ ನಂಬರುಗಳನ್ನ ಪಡೆಯುವಂಥಾವರಿಗೆ ಗ್ರಂಥ ರತ್ನಾಕರ ಮುದ್ರಾಕ್ಷರ ಶಾಲೆಯಲ್ಲಿ ಛಾಪಿಸಲ್ಪಟ್ಟ ಚತುರ್ಭಾಷ್ಯಾಸಲುಳ್ಳ ರಾಜಶೇಖರ.
5 ಡಿಟೋ ಯವರಿಂದ	ಹೊಸದುರ್ಗ ತಾಲ್ಲೂಕು ಗವರ್ಣಮೆಂಟ್ ಕನ್ನಡ ಸ್ಕೂಲಿನಿಂದ ತೇರ್ಗಡೆ ಹೊಂದುವವರ ಪೈಕಿ ಗಣಿತದಲ್ಲಿ ಅಧಿಕವಾದ ನಂಬರುಗಳನ್ನ ಪಡೆಯುವಂಥಾವರಿಗೆ ಮಳವಳ್ಳಿ ಗವರ್ಣಮೆಂಟ್ ಕನ್ನಡ ಸ್ಕೂಲ್ ಹೆಡ್ ಮಾಸ್ಟರಿಂದ ರಚಿಸಲ್ಪಟ್ಟ ಕನ್ನಡ ಬೀಜಗಣಿತ.
6 ಆರಕಲ್‌ಗೂಡು ತಾಲ್ಲೂಕು ರೆಕಾರ್ಡು ಕೀಪರ್ ವು॥ ರಾ॥ ವೆಂಕಟಾಚಾರ್ಯ, ನಗದೀ ಗುಮಾಸ್ತೆ ಜಿ. ಶಾಮಂಣ ಮತ್ತು ಜುಡಿಷಿಯಲ್ ಗುಮಾಸ್ತೆ ಸೂರ್ಯನಾರಾಯಣಪ್ಪ ಇವರುಗಳಿಂದ	ಆರಕಲ್‌ಗೂಡು ತಾಲ್ಲೂಕು ಗವರ್ಣಮೆಂಟ್ ಕನ್ನಡ ಸ್ಕೂಲಿನಿಂದ ತೇರ್ಗಡೆ ಹೊಂದುವವರ ಪೈಕಿ ಅಧಿಕವಾದ ನಂಬರುಗಳನ್ನ ಪಡೆಯುವಂಥಾವರಿಗೆ ಸಂಸ್ಕೃತ ಶ್ರೀಮದ್ಭಾಗವತಾಯಣ.
7 ಸಿವಿಲ್ ಮೆಡಿಸ್ಪಿಕ್ಸ್ ಫಾರೆಸ್ಟ್ ಪ್ರೊಪೇಷನರಾದ ವು॥ ರಾ॥ ಕೆ. ರಾಮಯ್ಯಂಗಾರ್ಯರವರಿಂದ ..	ಆರೋಗ್ಯ ಮತ್ತು ವ್ಯವಸಾಯ ಶಾಸ್ತ್ರಗಳಲ್ಲಿ ಮೈಸೂರು ಶೀಮೆಯಲ್ಲಿ ಅಧಿಕವಾದ ನಂಬರುಗಳನ್ನ ಪಡೆದು ತೇರ್ಗಡೆ ಹೊಂದುವಂಥಾವರಿಗೆ ಬಂದು ವಾಟರ್‌ಬರಿ ಗಣಿಯಾರ.

ಎಲ್. ರೈಸ್,
ಎಜ್ಯುಕೇಷನ್ ಸೆಕ್ರಟರಿ.